# ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟದೆ)

ಮೆಸ್ಕಾಂ
MESCOM

ಅಧೀಕ್ಷಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ವೃತ್ತ,
ಮೆಸ್ಕಾಂ, ಚಿಕ್ಕಮಗಳೂರು – 577101
ಫೋನ್ : 08262-233313
ಫ್ಯಾಕ್ಸ್ ಸಂ: 08262-233312

ನೊಂ. ಕ : ಆಡಳಿತ ಕಛೇರಿ
ಮೆಸ್ಕಾಂ ಭವನ, ಕಾವೂರು ಅಡ್ಡ ರಸ್ತೆ,
ಬೀಜೈ, ಮಂಗಳೂರು-575004
C.I.No : (CIN) U40109 KA 2002 SGC 030425
Email : seecmlmescom@rediffmail.com
Web : www.mesco.in


ಸಂಖ್ಯೆ: ಅಇಂ(ವಿ)/ಕಾಪಾವೃ/ಚಿ/ಕಾ.ನಿ.ಇಂ(ಕ)/ಸ.ಕಾಇಂ(ಕ)/ಕಿಇಂ-2/2021-22/ 8076-90 ದಿನಾಂಕ: 20 MAY 2021

## ಸುತ್ತೋಲೆ

O/C

**ವಿಷಯ** :ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿಪತ್ತು ನಿರ್ವಹಣಾ ಅಧಿಕಾರಿಗಳ ದೂರವಾಣಿ ಕರೆಗಳಿಗೆ ಸ್ಪಂದಿಸುವ ಬಗ್ಗೆ.

**ಉಲ್ಲೇಖ**:-1 ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ರವರು ಜರುಗಿಸಿದ ವಿಪತ್ತು ನಿರ್ವಹಣಾ ಸಭೆಯ ದಿನಾಂಕ: 15.05.2021

2. ಈ ಕಛೇರಿ ಪತ್ರ ಸಂಖ್ಯೆ: 2013 ದಿನಾಂಕ: 18.05.2021.

************

ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ, 2021-22ರ ಅವಧಿಯಲ್ಲಿನ ಮಳೆಗಾಲದ ಹಿನ್ನೆಲೆಯಲ್ಲಿ ವಿಪತ್ತುಗಳು ಮತ್ತು ಹಾನಿಗಳ ಬಗ್ಗೆ ಸಮಗ್ರ ಸಮೀಕ್ಷೆ ಹಾಗೂ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತಂತೆ ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ರವರು ದಿನಾಂಕ: 15.05.2021 ಸಭೆಯನ್ನು ನಡೆಸಿದ ಸಂದರ್ಭದಲ್ಲಿ ಮೆಸ್ಕಾಂ ಚಿಕ್ಕಮಗಳೂರು ವೃತ್ತ ವ್ಯಾಪ್ತಿಯಲ್ಲಿನ ಅಧಿಕಾರಿಗಳ ಮೊಬೈಲ್ ಸಂಖ್ಯೆಯ ಮಾಹಿತಿಯನ್ನು ಸಲ್ಲಿಸಲು ಹಾಗೂ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ನಿರ್ವಹಣಾ ಅಧಿಕಾರಿಗಳು ವಿಪತ್ತುಗಳು ಮತ್ತು ಹಾನಿಗಳ ಬಗ್ಗೆ ವರದಿ ಪಡೆಯಲು ದೂರವಾಣಿ ಕರೆಗಳನ್ನು ಮಾಡಿದ್ದಲ್ಲಿ ಕೂಡಲೇ ಸ್ಪಂದಿಸಲು ಸೂಚಿಸಿರುತ್ತಾರೆ. ಅದರಂತೆ ಉಲ್ಲೇಖ ಪತ್ರ (2) ರಲ್ಲಿ ಈಗಾಗಲೇ ಮೆಸ್ಕಾಂ ಚಿಕ್ಕಮಗಳೂರು ವೃತ್ತ ವ್ಯಾಪ್ತಿಯಲ್ಲಿನ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ರವರ ಮೊಬೈಲ್ ಸಂಖ್ಯೆಯ ಮಾಹಿತಿಯನ್ನು ಸಲ್ಲಿಸಲಾಗಿರುತ್ತದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಮೆಸ್ಕಾಂ ಆಸ್ತಿ ಹಾನಿಗೊಳ್ಳಗಾದ ಹಾಗೂ ವಿದ್ಯುತ್ ವ್ಯತೆಯವಾದ ಸಂದರ್ಭದಲ್ಲಿ, ಚಿಕ್ಕಮಗಳೂರು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ನಿರ್ವಹಣಾ ಅಧಿಕಾರಿಗಳು ದೂರವಾಣಿ ಕರೆಗಳನ್ನು ಮಾಡಿದ್ದಲ್ಲಿ ಕೂಡಲೇ ದೂರವಾಣಿ ಕರೆಗಳಿಗೆ ಚಿಕ್ಕಮಗಳೂರು ವೃತ್ತ ವ್ಯಾಪ್ತಿಯಲ್ಲಿನ ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸ್ಪಂದಿಸುವುದು ಮತ್ತು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಈ ಬಗ್ಗೆ ಮಾಹಿತಿಯನ್ನು ನೀಡಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಸೂಚಿಸಲಾಗಿದೆ. ಮೇಲೆ ತಿಳಿಸಿರುವ ಅಂಶಗಳನ್ನು ಪಾಲಿಸದಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಅಧೀಕ್ಷಕ ಇಂಜಿನಿಯರ್(ವಿ),
ವೃತ್ತ ಕಛೇರಿ, ಮೆಸ್ಕಾಂ, ಚಿಕ್ಕಮಗಳೂರು.

**ಪ್ರತಿಗಳು** :

(1) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಚಿಕ್ಕಮಗಳೂರು/ಕಡೂರು/ಕೊಪ್ಪ ವಿಭಾಗ ಮೆಸ್ಕಾಂ ಇವರ ಮಾಹಿತಿಗಾಗಿ.

(2) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ನಗರ / ಗ್ರಾಮೀಣ / ಮೂಡಿಗೆರೆ / ಆಲ್ದೂರು / ಕಳಸ / ಕೊಪ್ಪ / ಕಡೂರು / ಬೀರೂರು / ತರೀಕೆರೆ / ಅಜ್ಜಂಪುರ / ಬಾಳೆಹೊನ್ನೂರು / ಶೃಂಗೇರಿ ಉಪ ವಿಭಾಗ, ಮೆಸ್ಕಾಂ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ. ತಮ್ಮ ಎಲ್ಲಾ ಶಾಖಾಧಿಕಾರಿಗಳಿಗೆ ಒಂದು ಪ್ರತಿಯನ್ನು ಕಳುಹಿಸಿಕೊಡಲು ಸೂಚಿಸಲಾಗಿದೆ

(3) ಎಲ್ಲಾ ಶಾಖಾಧಿಕಾರಿಗಳು(ವಿ), ಕಾ ಮತ್ತು ಪಾ ಶಾಖೆ, ಮೆಸ್ಕಾಂ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

(4) ಮುಕ/ಕಡತ.